ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/ 75 ದಿನಾಂಕ : 08/07/24

# ಸುತ್ತೋಲೆ

**ವಿಷಯ:-** 2024-25ನೇ ಸಾಲಿನಲ್ಲಿ ಕವಿವಿ, ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರ ವಿವರವಾದ ಮಾಹಿತಿಯನ್ನು ಪೂರೈಸುವ ಕುರಿತು.

**ಉಲ್ಲೇಖ:-** ಕುಲಪತಿಗಳ ಆದೇಶ ದಿನಾಂಕ: 05/07/2024

****

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2024-25ನೇ ಸಾಲಿನ ಪರೀಕ್ಷಾ ಕಾರ್ಯಗಳನ್ನು ಜರುಗಿಸಲು ವಿಷಯವಾರು Subject Wise ಶಿಕ್ಷಕರ ಜೇಷ್ಠತಾ ಯಾದಿಯನ್ನು ತಯಾರಿಸಬೇಕಾಗಿದ್ದು, ತಮ್ಮ ಮಹಾವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ 1 ರಿಂದ 6ನೇ ಸೆಮಿಸ್ಟರ ತರಗತಿಗಳಿಗೆ ಬೋದಿಸುತ್ತಿರುವ ಖಾಯಂ U.G.C./State Scale ಶಿಕ್ಷಕರ ಮಾಹಿತಿಯನ್ನು ನಮೂನೆ A ರಲ್ಲಿ ಹಾಗೂ Non-U.G.C. (Full Time/Temporary/Part-time/Guest Faculty) ಶಿಕ್ಷಕರ ಮಾಹಿತಿಯನ್ನು ನಮೂನೆ B ರಲ್ಲಿ ಪ್ರತ್ಯೇಕವಾಗಿ ವಿಷಯವಾರು (Subject Wise) ಯಾದಿ ತಯಾರಿಸಿ, ಪ್ರತಿ ಯಾದಿಗೆ ಪ್ರಾಚಾರ್ಯರ ರುಜು ಹಾಗೂ ಮುದ್ರೆಯೊಂದಿಗೆ ಲಗತ್ತಿಸಿರುವ ನಮೂನೆಗಳನ್ನು ದಿನಾಂಕ:20.07.2024ರ ಒಳಗಾಗಿ ಪರೀಕ್ಷಾ ಗೌಪ್ಯ ವಿಭಾಗಕ್ಕೆ ಸಲ್ಲಿಸಲು ತಿಳಿಸಲಾಗಿದೆ.

**ಪ್ರಾಚಾರ್ಯರು/ಪ್ರಾಧ್ಯಾಪಕರ ಮಾಹಿತಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಗಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.**

1. ಯುಜಿಸಿ ಪ್ರಾಧ್ಯಾಪಕರು ತಮ್ಮ ಜನ್ಮ ದಿನಾಂಕ ಹಾಗೂ ನೇರ ನೇಮಕಾತಿ/ಸಕ್ರಮಾತಿಗೊಂಡ ದಿನಾಂಕಗಳನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿದಂತೆ ಅದರ ಪ್ರಕಾರ ಸಲ್ಲಿಸುವುದು.
2. ಯುಜಿಸಿ ಪ್ರಾಧ್ಯಾಪಕರು ವರ್ಗಾವಣೆ/ನಿಯೋಜನೆಗೊಂಡಂತಹ/ನಿವೃತ್ತಿ/ಸ್ವಯಂ ನಿವೃತ್ತಿ/ಮರಣ ಹೊಂದಿದ ವಿವರವನ್ನು ಪ್ರತ್ಯೇಕವಾಗಿ ಸಲ್ಲಿಸುವುದು.
3. ನಾನ್-ಯುಜಿಸಿ ಪ್ರಾಧ್ಯಾಪಕರು ಪ್ರಸ್ತುತ ಮಹಾವಿದ್ಯಾಲಯ ಬಿಟ್ಟು ಬೇರೆ ಮಹಾವಿದ್ಯಾಲಯಕ್ಕೆ ನೇಮಕವಾದಲ್ಲಿ ಅಂತಹ ಪ್ರಾಧ್ಯಾಪಕರ ಮಾಹಿತಿಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು.
4. ಯುಜಿಸಿ/ನಾನ್-ಯುಜಿಸಿ ಪ್ರಾಧ್ಯಾಪಕರು ತಾವು 1 ರಿಂದ 6 ನೇ ಸೆಮಿಸ್ಟರ್‌ಗಳವರೆಗಿನ ಭೋದಿಸುತ್ತಿರುವ ಎಲ್ಲ ವಿಷಯಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವುದು.
5. ನಾನ್-ಯುಜಿಸಿ ಪ್ರಾಧ್ಯಾಪಕರು ವಾಣಿಜ್ಯಶಾಸ್ತ್ರ/ಬಿಬಿಎ/ಬಿಸಿಎ/ಬಿ.ಕಾಂ.(ಸಿಎಸ್)/ಬಿ.ಎಸ್ಸಿ.(ಸಿಎಸ್)/ ವಿಷಯಗಳಿಗೆ ಸಂಬಂಧಿಸಿದಂತೆ 1 ರಿಂದ 6 ನೇ ಸೆಮಿಸ್ಟರ್‌ವರೆಗಿನ ಭೋದಿಸುವ ವಿಷಯಗಳನ್ನು ವಿವರವಾಗಿ ನಮೂದಿಸುವುದು.
6. ನಾನ್-ಯುಜಿಸಿ ಪ್ರಾಧ್ಯಾಪಕರು ಬಿ.ಎ./ಬಿ.ಕಾಂ ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ 1 ರಿಂದ 6ನೇ ಸೆಮಿಸ್ಟರ್ ಭೋದಿಸುವ ವಿಷಯಗಳನ್ನು ವಿವರವಾಗಿ ನಮೂದಿಸುವುದು.
7. ನಾನ್-ಯುಜಿಸಿ ಪ್ರಾಧ್ಯಾಪಕರು ಪ್ರಸ್ತುತ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವದನ್ನು ಹೊರತುಪಡಿಸಿ ಬೇರೆ ಮಹಾವಿದ್ಯಾಲಯದಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ್ದಲ್ಲಿ ಸೇವಾ ಪ್ರಮಾಣ ಪತ್ರವನ್ನು ತಪ್ಪದೇ ಲಗತ್ತಿಸುವುದು.

ಮುಂದುವರೆದು, ಈ ಬಾರಿ ನಮೂನೆ A ಮತ್ತು B ರಲ್ಲಿ ಕಾಣಿಸುವ ಮಾಹಿತಿಯನ್ನು ಇಂಗ್ಲೀಷನಲ್ಲಿ ಎರಡು ಪ್ರತ್ಯೇಕ Execl Sheet ನಲ್ಲಿ Soft Copy ಯನ್ನು ಮಿಂಚಂಚೆ ಮೂಲಕ confidential@kud.ac.in ಈ ವಿಳಾಸಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ತಾವು ಸಲ್ಲಿಸುವ ಮಾಹಿತಿಯನ್ನು ಅಪೂರ್ಣ ಎಂದು ಪರಿಗಣಿಸಲಾಗುವದು.

ನಮೂನೆ A ಮತ್ತು B ಯ Execl Sheet File ನ್ನು ಕರ್ನಾಟಕ ವಿಶ್ವವಿದ್ಯಾಲಯದ ವೆಬ್‌ಸೈಟ್ www.kud.ac.in ರಲ್ಲಿ ಲಭ್ಯವಿರುತ್ತದೆ. ಇದನ್ನು ಜರೂರ ಎಂದು ಪರಿಗಣಿಸುವುದು.

8/7

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ,

<u>ಪ್ರತಿ ಸಾದರಪೂರ್ವಕವಾಗಿ:</u>

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಿನಿ ವಿಧಾನಸೌಧ, ಡಿ.ಸಿ.ಕಂಪೌಂಡ, ಧಾರವಾಡ.

<u>ಪ್ರತಿ ಮಾಹಿತಿಗಾಗಿ:</u>

1. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಕುಲಪತಿಗಳ/ಕುಲಸಚಿವರ/ ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.

**ಸೂಚನೆ:-** ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ನಾನ್-ಯುಜಿಸಿ (ಪೂರ್ಣಾವಧಿ /ತಾತ್ಕಾಲಿಕ/ಅತಿಥಿ) **ಉಪನ್ಯಾಸಕರ ಮಾಹಿತಿಯನ್ನು ನಮೂನೆ "B" ಯಲ್ಲಿ ಸಲ್ಲಿಸಲು ತಿಳಿಸಲಾಗಿದ್ದರೂ ಸಹ ಮೌಲ್ಯಮಾಪನ ಸಮಯದಲ್ಲಿ 3 ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸಿದ್ದಂತಹ ಶಿಕ್ಷಕರ ಹೆಸರುಗಳು ಯಾದಿಯಲ್ಲಿ ನಮೂದಾಗದೇ ನಂತರ ಮೌಲ್ಯಮಾಪನ ಸಮಯದಲ್ಲಿ ಅನುಮತಿ ಪಡೆಯುವುದು ಕಂಡುಬಂದಿದೆ. ಆದ್ದರಿಂದ ನಿಯಮಾನುಸಾರ ಮೂರು ವರ್ಷ ಮೇಲ್ಪಟ್ಟ ನಾನ್-ಯುಜಿಸಿ/ಪೂರ್ಣಾವಧಿ/ತಾತ್ಕಲಿಕ/ಅತಿಥಿ ಉಪನ್ಯಾಸಕರ ಶಿಕ್ಷಕರ ಹೆಸರುಗಳನ್ನು ನಮೂದಿಸಿ ಕಳುಹಿಸಲು ಸೂಚಿಸಲಾಗಿದೆ.**